<u>1ನೇ ಅಪರ ಮುಖ್ಯ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ</u>
<u>ಬೆಂಗಳೂರು ನಗರ</u>

ಸಿ.ಸಿ. ನಂ. 22603-2022

ಸಿಡಬ್ಲೂ -2 ಪಿಡಬ್ಲೂ-2

| | | |
|---|---|---|
| ಸಾಕ್ಷಿದಾರರ ಹೆಸರು | : | ದೇವರಾಜಮ್ಮ |
| ಗಂಡನ ಹೆಸರು | : | ಎನ್ ಯಲ್ಲಪ್ಪ |
| ವಯಸ್ಸು | : | 58 ವರ್ಷ |
| ಕೆಲಸ | : | ಗೃಹಿಣಿ |
| ವಾಸ | : | ದೊಡ್ಡಬಳ್ಳಾಪುರ |

<u>ಸಾಕ್ಷಿಯನ್ನು ದಿನಾಂಕಃ 03-01-2026 ರಂದು ಕರೆಸಿ ಪ್ರಮಾಣ ಮಾಡಿಸಲಾಯಿತು.</u>

<u>ಮುಖ್ಯ ವಿಚಾರಣೆ ಹಿ.ಸ.ಸಾ.ಅ. ರವರಿಂದಃ</u>

ನನಗೆ ಚಾಸಾ 1, 3 ರಿಂದ 8 ಮತ್ತು ಆರೋಪಿಗಳು ಗೊತ್ತು. ಸಾಕ್ಷಿಯು ನಿಪಿ.2 ರಲ್ಲಿ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, ಸಾಕ್ಷಿಯ ಸಹಿಯನ್ನು ನಿಪಿ.2ಬಿ ಎಂದು ಗುರುತಿಸಲಾಯಿತು. ದಿ. 10-04-2019 ರಲ್ಲಿ ನಾನು ಚಾಸಾ 5 ರವರಿಗೆ ಫೋನ್ ಮಾಡಿದ್ದು ಆಗ ಅವರು ಚಾಸಾ 1 ರವರ ವಿಚಾರದಲ್ಲಿ ಗಲಾಟೆ ಆಗಿರುವುದಾಗಿ ತಿಳಿಸಿರುತ್ತಾರೆ. ಆಗ ನಾನು ಬೆಂಗಳೂರಿಗೆ ಬರುತ್ತಿರುವುದಾಗಿ ಹೇಳಿ ಚಾಸಾ 1 ರವರ ಫೋನ್ ನಂಬರ್ ನ್ನು ತೆಗೆದುಕೊಂಡು ಚಾಸಾ 1 ರವರಿಗೆ ಕರೆ ಮಾಡಿದಾಗ ಚಾಸಾ 1 ರವರು ವೈಯಾಲಿಕಾವಲ್ ಹೋಟೆಲ್ ಬಳಿ ಬರುವಂತೆ ಹೇಳಿದ್ದು, ನಾನು ಅಲ್ಲಿಗೆ ಬಂದಿರುತ್ತೇನೆ.

ಆಗ ಚಾಸಾ 1 ರವರು ಅಲ್ಲಿಗೆ ಬಂದಿದ್ದು ಆಕೆಯ ತಲೆಗೆ ಗಾಯವಾಗಿತ್ತು. ಆಗ ಚಾಸಾ 1 ರವರು ನನ್ನನ್ನು ತನ್ನ ಗಂಡನ ಮನೆಗೆ ಕರೆದುಕೊಂಡು ಹೋಗಿರುತ್ತಾರೆ. ಆರೋಪಿತರು ನಮ್ಮನ್ನು ಮನೆಯ ಒಳಗೆ ಸೇರಿಸಿಕೊಂಡಿರುವುದಿಲ್ಲ ನಾವು ಮನೆಯ ಮುಂಭಾಗ ಕಾಪೌಂಡ್ ಒಳಗೆ ನಿಂತುಕೊಂಡಿದ್ದೇವು. 11 ನೇ ತಾರೀಖಿನಂದು ಬೆಳಿಗ್ಗೆ 09.20 -09.30 ಗಂಟೆಯ ಸಮಯಕ್ಕೆ ಪೊಲೀಸರು ಬಂದಿದ್ದು ಮನೆಯ ಒಳಗೆ ಹೋಗಿ ಬಂದು ಮಹಜರ್ ಗೆ ನನ್ನ ಮತ್ತು ಚಾಸಾ 3 ರವರ ಸಹಿಯನ್ನು ಪಡೆದಿರುತ್ತಾರೆ.

**Inspite of direction accused have not called their advocate hence, cross taken accuses nil**

ಮರುವಿಚಾರಣೆಃ ಇಲ್ಲ

(ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು. ಸಾಕ್ಷಿಯ ಎದುರಿನಲ್ಲಿ ಓದಿ ಹೇಳಿದ ಮೇಲೆ ಸರಿ ಇದೆ ಎಂದು ಒಪ್ಪಿ ಸಹಿ ಮಾಡಲಾಯಿತು.)

ಓ ಹೇ ಕೇ ಸ ಇ ಒ

1 ನೇ ಅ. ಮು. ನ್ಯಾ.ದಂ. ನ್ಯಾ